# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

# ಕೆ.ಆರ್.ನಗರ

## ಸಿ.ಮಿಸ್ 85/2020

***ಆರ್ ಡಬ್ಲೂ-1***

| | | |
|---|---|---|
| ಸಾಕ್ಷಿದಾರರ ಹೆಸರು | - | ಕೃಷ್ಣಮೂರ್ತಿ |
| ತಂದೆಯ ಹೆಸರು | - | ಭಾಸ್ಕರಾಚಾರ್ಯ |
| ವಯಸ್ಸು | - | 44 ವರ್ಷ |
| ಕೆಲಸ | - | ಕೂಲಿ ಕೆಲಸ |
| ವಾಸ | - | ಕೊಣಸೂರು, ಬೆಟ್ಟದಪುರ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು |

**ಸಾಕ್ಷಿಯನ್ನು ದಿನಾಂಕ 19-05-2025 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಎಲ್.ವಿ.ಆರ್. ಎದುರುದಾರರ ಪರ ವಕೀಲರು**

ನನ್ನ ಹಾಗೂ ಅರ್ಜಿದಾರರಾದ ಧಮಯಂತಿ ನಡುವೆ ದಿಃ 06-08-2012 ರಂದು ಸಾಯಿಸಮುದಾಯ ಭವನ ಪಿರಿಯಾಪಟ್ಟಣದಲ್ಲಿ ನೇರವೇರಿರುತ್ತದೆ. ಮದುವೆಯಾದ ನಂತರ 15 ದಿನಗಳ ಕಾಲ ನಮ್ಮ ಮನೆಯಲ್ಲಿ ಸಂಸಾರಿಕ ಜೀವನವನ್ನು ನಡೆಸಿದ್ದು ನಂತರ ಅರ್ಜಿದಾರರು ಶಿಕ್ಷಕಿಯಾಗಿ ಬಳೆ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಕೆ.ಆರ್. ನಗರಕ್ಕೆ ಬಂದಿರುತ್ತೇವೆ.

2. ನಾನು ಎಸ್.ಎಸ್.ಎಲ್.ಸಿ ಪಾಸ್ ಆಗಿದ್ದು ಪಿಯುಸಿಯಲ್ಲಿ ಅನುತೀರ್ಣನಾದ ಕಾರಣ ಒಪ್ಪಂದದ ಮೇರೆಗೆ ನಾನು ಮೈಸೂರಿನ ಹೆಬ್ಬಾಳು ಬಳಿ ಇರುವ ಸಾಯಿ ಕಾಟನ್ಸ್ ಕಂಪನಿಯಲ್ಲಿ ಲೋಡಿಂಗ್ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ನನ್ನ ಹೆಂಡತಿಯ ಮನೆಯಿಂದಲೇ ಕೆಲಸಕ್ಕೆ ಹೋಗಿ ಬರುತ್ತಿದ್ದೆ.

**3.** ಇದಾದ 1 ½ ವರ್ಷದ ನಂತರ ಗ್ಲೋಟಾನಿಕ್ ಖಾಸಗೀ ಕಂಪನಿಯಲ್ಲಿ ಒಪ್ಪಂದದ ಮೇರೆಗೆ ಕೆಲಸಕ್ಕೆ ಸೇರಿರುತ್ತೇನೆ. ಆ ಸಮಯದಲ್ಲಿ ನನ್ನ ಹೆಂಡತಿ ಮತ್ತು ಮಾವ ಮಾಂಗಲ್ಯ ಸರ ಮತ್ತು ಬೈಕ್ ನ್ನು ಕೊಡಿಸುವಂತೆ ಕೋರಿ ನನಗೆ ಹಿಂಸೆ ಕೊಡುತ್ತಿದ್ದರು. ನಂತರ ನಾನು ಅರ್ಜಿದಾರರ ಜೊತೆ ಪ್ರತ್ಯೇಕವಾಗಿ ವಾಸಿಸಲು ತಿಳಿಸಿದ್ದು ಅದಕ್ಕೆ ಅನುಮತಿಯನ್ನು ನೀಡಿರುವುದಿಲ್ಲ.

**4**. ಅರ್ಜಿದಾರರು ಮತ್ತು ಅವರ ತಂದೆ ನನಗೆ ಊರಿಗೆ ಹೋಗಬೇಡ ಮತ್ತು ತಂದೆ-ತಾಯಿಯನ್ನು ನೋಡಿಕೊಳ್ಳಬೇಡ ಅವರಿಗೆ ಯಾವ ಸಹಾಯವನ್ನು ಮಾಡಬೇಡ ಸಂಪೂರ್ಣ ಹಣವನ್ನು ನಮಗೆ ಕೊಡು ಎಂದು ಹೇಳುತ್ತಿದ್ದರು. ನಂತರ ನನಗೆ ಅನಾರೋಗ್ಯದರ ಕಾರಣ 16 ಇಂಚಿನ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ಆ ಸಮಯದಲ್ಲಿ ಅರ್ಜಿದಾರರು ಯಾರೂ ಸಹ ಆಸ್ಪತ್ರೆಗೆ ಬಂದಿರುವುದಿಲ್ಲ.

**5.** ನಂತರ ನಾನು ನಮ್ಮ ತಂದೆ-ತಾಯಿ ಇರುವ ಗ್ರಾಮಕ್ಕೆ ತೆರಳಿರುತ್ತೇನೆ. ನಂತರ ನಾವು ಹಿರಿಯರಿಗೆ ವಿಚಾರವನ್ನು ತಿಳಿಸಿ ಪಿರಿಯಾಪಟ್ಟಣದಲ್ಲಿರುವ ಅರ್ಜಿದಾರರ ಸಹೋದರ ಮಾವನ ಮನೆಯಲ್ಲಿ ಪಂಚಾಯಿತಿಯನ್ನು ಸಹ ಮಾಡಿರುತ್ತೇವೆ. ಪಂಚಾಯಿತಿಯಲ್ಲಿ ಅರ್ಜಿದಾರರಿಗೆ ಗಂಡನ ಜೊತೆಯಲ್ಲಿ ಹೋಗಿ ಜೀವನ ನಡೆಸುವಂತೆ ಅರ್ಜಿದಾರರಿಗೆ ಸಲಹೆಗಳನ್ನು ಮತ್ತು ನಿರ್ದೇಶನಗಳನ್ನು ಕೊಟ್ಟರು ಸಹ ಅವರು ನನ್ನ ಜೊತೆ ಬರಲು ನಿರಾಕರಿಸಿರುತ್ತಾರೆ.

**6.** ನಂತರ ನಮ್ಮ ತಂದೆ ತಾಯಿ ನನ್ನನ್ನು ಸಮಾಧಾನ ಮಾಡಿ ಅರ್ಜಿದಾರರ ಜೊತೆಗೆ ಹೋಗಿ ಜೀವನವನ್ನು ಸಾಗಿಸುವಂತೆ ತಿಳಿಸಿರುತ್ತಾರೆ. ನಂತರ ನಾನು ಅರ್ಜಿದಾರರ ಮನೆಗೆ ಹೋದಾಗ ಅರ್ಜಿದಾರರು ಅವರ ತಂದೆ-ತಾಯಿ ಮತ್ತು ನಮ್ಮ ಅತ್ತೆಯ ಅಕ್ಕ ಎಲ್ಲರೂ ಸೇರಿ ನನಗೆ ಒಂದು ಮರದ ಹಲಗೆಯಿಂದ ನನ್ನ ತಲೆಗೆ ಹಲ್ಲೆ ಮಾಡಿದ್ದು ನಾನು ಅಲ್ಲಿಂದ ತಪ್ಪಿಸಿಕೊಂಡು ನೇರವಾಗಿ ಕೆ.ಆರ್.ನಗರ ಪೊಲೀಸ್ ಠಾಣೆಗೆ ಹೋಗಿರುತ್ತೇನೆ.

**7.** ನಂತರ ಪೊಲೀಸ್ ಠಾಣೆಯಲ್ಲಿ ಅರ್ಜಿದಾರರನ್ನು ಕರೆಯಿಸಿ ರಾಜಿ ಮಾಡಿರುತ್ತಾರೆ. ನಂತರ ನಾನು ಅರ್ಜಿದಾರರ ಮನೆಗೆ ಹೋಗದೆ ಬೇರೆ ಕಡೆ ವಾಸವಾಗಿರುತ್ತೇನೆ. ಇದಾದ ನಂತರ ನಾನು ನಮ್ಮ ಮಾವನ ಮಗನನ್ನು ಕರೆದುಕೊಂಡು ಅರ್ಜಿದಾರರ ಮನೆಗೆ ಹೋದಾಗ ನನ್ನನ್ನು ಮನೆಯೊಳಗಡೆ ಕರೆದಿರುವುದಿಲ್ಲ. ನಮ್ಮ ಮಾವನ ಮಗನ ಹತ್ತಿರ ಅರ್ಜಿದಾರರ ಕುಟುಂಬದವರು ನಾನು ಅವರಿಗೆ ಅವಶ್ಯಕತೆಯಿಲ್ಲ ಎಂದು ತಿಳಿಸಿರುತ್ತಾರೆ.

**8.** ಇದಾದ ಸ್ವಲ್ಪ ದಿನಗಳ ನಂತರ ನಾನು ನಮ್ಮ ತಂದೆಯ ಜೊತೆಗೂ ಸಹ ಅರ್ಜಿದಾರರ ಮನೆಗೆ ಹೋಗಿರುತ್ತೇನೆ. ಆಗಲೂ ಸಹ ನಮ್ಮನ್ನು ಮನೆಯ ಒಳಗಡೆ ಕರೆಯಿದೆ ಮಗಳನ್ನು ಕಳುಹಿಸುವುದಿಲ್ಲ ಮತ್ತು ಅರ್ಜಿದಾರಳು ಪದವೀದರಳಾಗಿದ್ದು ನಾನು ಯಾವುದೇ ಪದವಿಯನ್ನು ಪಡೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ನನಗೆ ವಯಸ್ಸಾದ ತಂದೆ-ತಾಯಿ ಇದ್ದು ಅವರ ಸಂಪೂರ್ಣ ಖರ್ಚು-ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ.

**9.** ನಾನು ಪ್ರತಿದಿನ ಕೂಲಿ ಕೆಲಸಕ್ಕೆ ಹೋಗುತ್ತಿದ್ದು, ನನಗೆ ತಿಂಗಳ ಪೂರ್ತಿ ಕೂಲಿ ಕೆಲಸ ಸಿಗುವುದಿಲ್ಲ. ತಿಂಗಳಲ್ಲಿ ಕೆಲವು ದಿನಗಳು ಮಾತ್ರ ಕೂಲಿ ಕೆಲಸ ಮಾಡಲು ನನಗೆ ಅವಕಾಶ ದೊರಕುತ್ತದೆ. ಪ್ರಸ್ತುತ ಅರ್ಜಿದಾರರು ಚೀರನಹಳ್ಳಿ ರಸ್ತೆಯಲ್ಲಿರುವ ಕಾಗಿನೆಲೆ ವಿದ್ಯಾಸಂಸ್ಥೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುತ್ತಾರೆ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ